**ಸಾಕ್ಷಿಯನ್ನು ದಿಃ02.09.2022 ರಂದು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಬಿ ವಕೀಲರಿಂದಃ**

5. 2013 ರ ಅಕ್ಟೋಬರ್, ನವೆಂಬರ, ಡಿಸೆಂಬರ್ ತಿಂಗಳುಗಳಲ್ಲಿ ಪೋಲಿಸರು ನನ್ನನ್ನು ಕರೆಸಿ ವಿಚಾರ ಮಾಡಿಲ್ಲ ಎಂದರೆ ಸರಿ. ಆ ಅವಧಿಯಲ್ಲಿ ನಾನು ಪೋಲಿಸ್ ಠಾಣೆಗೆ ಹೋಗಿ ಏನೂ ಹೇಳಿಲ್ಲ ಎಂದರೆ ಸರಿ. 2014 ರ ಜನವರಿಯಿಂದ ಮೇ ತಿಂಗಳುವರೆಗೆ ನಾನು ಪೋಲಿಸ್ ಠಾಣೆಗೆ ಹೋಗಿ ಏನೂ ಹೇಳಿಲ್ಲ ಮತ್ತು ಘಟನೆಯ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸರಿ. 1 ನೇ ಆರೋಪಿ ಮತ್ತು ಆತನ ಮಕ್ಕಳು ನಮ್ಮ ಊರಿನ ಶಾಲೆಯ ಬಳಿಗೆ ಹೋಗಿದ್ದರು, ನಂತರ ಶ್ರೀನಿವಾಸನ ಕೈ ಮತ್ತು ಕಾಲುಗಳನ್ನು ಕಟ್ಟಿ ಆಟೋದಲ್ಲಿ ಬಿಸಾಡಿದರು ಎಂದು ಮುಖ್ಯ ವಿಚಾರಣೆಯ ಎರಡನೇ ಪ್ಯಾರಾದಲ್ಲಿ ಹೇಳಿರುವ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ-1 ದೂರು ನೀಡಿದ ನಿಖರವಾದ ದಿನಾಂಕ ಗೊತ್ತಿಲ್ಲ. ಚಾಸಾ-1 ಯಾವ ಕಾರಣಕ್ಕಾಗಿ

ದೂರು ಕೊಟ್ಟರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-9 ರಿಂದ 12 ಇವುಗಳನ್ನು ತೋರಿಸಿ ಅವುಗಳಲ್ಲಿನ ಆಟೋದ ಆರ್ ಸಿ ಪುಸ್ತಕದಲ್ಲಿ ಯಾರ ಹೆಸರಿದೆ ಎಂದು ಗೊತ್ತಿದೆಯೇ ಎಂದರೆ ಸಾಕ್ಷಿದಾರರು ಇಲ್ಲ ಎನ್ನುತ್ತಾರೆ. ಮುಖ್ಯ ವಿಚಾರಣೆಯನ್ನು ಪೋಲಿಸರು ಹೇಳಿಕೊಟ್ಟಂತೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು